ದಿನಾಂಕ : 26.10.2021 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

<u>ಪಾಟೀ ಸವಾಲು : **1** ನೇ ಪ್ರತಿವಾದಿ ಪ**ರ ಶ್ರೀ** ಎಸ್ ವೈ ಎಸ್ **ವಕೀಲರಿಂದ,**</u>

ನನ್ನ ತಂದೆ ಕಲ್ಲಪ್ಪನ ಅಣ್ಣ ಗುಂಡಪ್ಪ ಎಂದರೆ ಸರಿ. ಗುಂಡಪ್ಪನ ಹೆಂಡತಿ ಗಂಗಮ್ಮ ಎಂದರೆ ಸರಿ. ಆಸ್ತಿ ಸರ್ವೆ ನಂ. 1084.ಎ/1 ಕ್ಷೇತ್ರ ನಾಲ್ಕು ಎಕರೆ ಮತ್ತು 1121.ಬಿ. ಕ್ಷೇತ್ರ 3 ಎಕರೆ 15 ಸೆಂಟ್ಸ್ ಗಂಗಮ್ಮನ ಹೆಸರಿನಲ್ಲಿದೆ ಎಂದರೆ ಸರಿ. ಈ ದಾವೆಯಲ್ಲಿ ಗಂಗಮ್ಮಳನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ಗುಂಡಪ್ಪ ತೀರಿಕೊಂಡಿದ್ದಾರೆ. ನನ್ನ ತಂದೆ ಕಲ್ಲಪ್ಪ ಬಳ್ಳಾರಿ ಕಾರ್ಪೊರೇಷನ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರು ನಿಂಗಮ್ಮ. ನನ್ನ ತಾಯಿ ನನ್ನ ತಂದೆಯ ಪಿಂಚಣಿ ಹಣವನ್ನು ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಬಳ್ಳಾರಿ ಬಳ್ಳಾರಿ ಮುನ್ಸಿಪಾಲ್ಟಿಯಲ್ಲಿ ಕೆಲಸ ಮಾಡುತ್ತಿದ್ದು ಅವರ ಮರಣ ನಂತರ ನನ್ನ ತಾಯಿ ಪಿಂಚಣಿ ಹಣ ಪಡೆದುಕೊಳ್ಳುತ್ತಿದ್ದರೂ ಸಹ ಪಡೆದುಕೊಳ್ಳುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಮಾಜಿಕ ಕಲ್ಯಾಣ ಇಲಾಖೆಯಲ್ಲಿ 2018 ನೇ ಇಸ್ವಿಯಲ್ಲಿ ಸೇವೆಯಿಂದ ನಿವೃತ್ತಿ ಹೊಂದಿರುತ್ತೇನೆ. ನಾನು ಇವಾಗ ಪಿಂಚಣಿ ಹಣ ಪಡೆಯುತ್ತಿದ್ದೇನೆ ಎಂದರೆ ಸರಿ. ನನ್ನ ತಮ್ಮ 2 ನೇ ವಾದಿಯೂ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು ಇತ್ತೀಚಿಗೆ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಮ್ಮ 3 ನೇ ವಾದಿ ಅಂಜಿನಪ್ಪ ಉಜ್ಜಯನಿ ಪ್ರೌಢ ಶಾಲೆ ಕೊಟ್ಟೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದು ಇವಾಗ ನಿವೃತ್ತಿ ಹೊಂದಿರುತ್ತಾರೆ. ನನ್ನ ತಂಗಿ 4 ನೇ ವಾದಿ ಮಲ್ಲಮ್ಮ ಆಕೆಯ ಗಂಡನ ಮನೆಯಾದ ಸೋಮಸಮುದ್ರ ಗ್ರಾಮದಲ್ಲಿ ಇರುತ್ತಾರೆ ಎಂದರೆ ಸರಿ. ನಮ್ಮ ತಂದೆ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು 4 ನೇ ತರಗತಿ ಓದಿರುತ್ತೇನೆ. 2 ನೇ ವಾದಿಯೂ 8 ನೇ ತರಗತಿ ಓದಿರುತ್ತಾರೆ. 3 ನೇ ವಾದಿಯೂ 6 ನೇ ತರಗತಿ ಓದಿರುತ್ತಾರೆ. ನಮೂನೆ-10 ರಲ್ಲಿ ಸರ್ವೆ ನಂ.1121.ಎ.ಯ ಬದಲು 1121.ಬಿ. ಎಂದು ತಪ್ಪಾಗಿರುತ್ತದೆ ಎನ್ನುವುದು ನನಗೆ 1986 ರಲ್ಲಿ ಗೊತ್ತಾಗಿರುತ್ತದೆ. 1986 ರಲ್ಲಿ ನ್ನ ತಂದೆಗೆ ಸರ್ವೆ ನಂಬರ್ ತಪ್ಪಾಗಿರುವುದು ಗೊತ್ತಾಗಿರುತ್ತದೆ, ಅದೇ ಸಮಯುದಲ್ಲಿ ನನಗೆ ಗೊತ್ತಾಗಿರುತ್ತದೆ. 1986 ರಿಂದ ಈ ದಾವೆ ಹಾಕುವ ತನಕ ಸರ್ವೆ ನಂಬರ್ ತಪ್ಪಾಗಿದೆ ಎಂದು ನಾನು ಯಾವುದೇ ಕಂದಾಯ ನ್ಯಾಯಾಲಯಗಳಲ್ಲಾಗಲಿ, ಸಿವಿಲ್ ನ್ಯಾಯಾಲಯಗಳಲ್ಲಾಗಲಿ

ಮೇಲ್ಮನವಿ ಸಲ್ಲಿರುವುದಿಲ್ಲ ಎಂದರೆ ಸಲ್ಲಿಸಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹಾಕಿರುತ್ತೇನೆ. ಕೇಸ್ ನಂಬರ್ ಗೊತ್ತಿರುವುದಿಲ್ಲ. ನಾನು ದಾವೆ ಸಲ್ಲಿಸಿದ ಬಗ್ಗೆ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರು ಪಡಿಸಿರುತ್ತೇನೆ. 1986 ರಿಂದ 2017 ರ ತನಕ ದಾವೆ ಸಲ್ಲಿಸಿದ್ದೇನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಸ್ವಾಧೀನದಲ್ಲಿದ್ದ, ನನ್ನ ತಂದೆಯ ನಂತರ ನಾನು ಸ್ವಾಧೀನದಲ್ಲಿರುವ ನಾಲ್ಕು ಎಕರೆ ಆಸ್ತಿಯ ಸರ್ವೆ ನಂ.1121.ಎ. ಇರುತ್ತದೆ. ಸದರಿ ಆಸ್ತಿಯೂ ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದು, ನನ್ನ ತಂದೆಯ ನಂತರ ನನ್ನ ಹೆಸರಿಗೆ ಪಟ್ಟ ಬದಲಾವಣೆಯಾಗಿರುತ್ತದೆ ಎಂದು ತೋರಿಸಲು ಪಹಣಿ ಪತ್ರಿಕೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸರ್ವೆ ನಂ.1121.ಎ. ಆಸ್ತಿ ಪೈಕಿ ಒಂದು ಎಕರೆ 78 ಸೆಂಟ್ಸ್ ಆಸ್ತಿಯನ್ನು ಶೀನಪ್ಪ ರವರಿಗೆ ಮಾರಾಟ ಮಾಡಿದ ನಂತರ ಉಳಿದ ಎರಡು ಎಕರೆ 22 ಸೆಂಟ್ಸ್ ಆಸ್ತಿಯೂ ನನ್ನ ತಂದೆಯ ಹೆಸರಿನಲ್ಲಿ ಉಳಿದುಕೊಂಡಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುವುದಿಲ್ಲ. ನನ್ನ ಹೆಂಡತಿಯ ಹೆಸರು ಅನುಸೂಯಮ್ಮ, ನನ್ನ ಮಗನ ಹೆಸರು ರಾಮಕೃಷ್ಣ. 1 ನೇ ಪ್ರತಿವಾದಿಯೂ ನನ್ನ ಹೆಂಡತಿ ಮತ್ತು ಮಗ ವೆಂಕಟೇಶ ರವರ ವಿರುದ್ಧ ಸರ್ವೆ ನಂ. 715 ಕ್ಷೇತ್ರ 90 ಸೆಂಟ್ಸ್ ಆಸ್ತಿಗೆ ಸಂಬಂಧಿಸಿದಂತೆ ಬಳ್ಳಾರಿ ಗ್ರಾಮೀಣ ಠಾಣೆಯಲ್ಲಿ ಗುನ್ನೆ ನಂಬರ್ 284/2017 ದಾಖಲು ಮಾಡಿದ್ದಾರೆ ಎಂದರೆ ಸಾಕ್ಷಿಯೂ ಸಾಕ್ಷಿಯೂ ದಾಖಲು ಮಾಡಿರುವುದನ್ನು ಕೇಳಿ ಗೊತ್ತಾಗಿರುತ್ತದೆ. ಸದರಿ ಪ್ರಕರಣದಲ್ಲಿ 1 ನೇ ಪ್ರತಿವಾದಿಯೂ ಸಾಗುವಳಿ ಮಾಡುತ್ತಿದ್ದ ಆಸ್ತಿಗೆ ಪೊಲೀಸರು ಪಂಚನಾಮೆ ಮಾಡಲು ಬಂದಾಗ ನಾನು ಹಾಜರಿದ್ದೇನು ಎಂದರೆ ಸರಿಯಲ್ಲ. ಪೊಲೀಸರು ಬಂದಿರುವುದು ನನಗೆ ಗೊತ್ತಿಲ್ಲ. ನಿಪಿ- 13 ಮತ್ತು 14 ನನ್ನ ತಂದೆ ನೀಡಿದ ಅರ್ಜಿ ಇರುತ್ತದೆ ಎಂದರೆ ಸರಿ. ಸದರಿ ಅರ್ಜಿಯ ಆಧಾರಂತೆ ಸರ್ವೆಯರ್ ಬಂದು ಆಸ್ತಿ ಅಳತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ- 13 ಮತ್ತು 14 ರ ಅರ್ಜಿಯ ಆಧಾರದಲ್ಲಿ ಸರ್ವೆಯರ್ ಸ್ಥಳಕ್ಕೆ ಬಂದು ಸರ್ವೆ ಮಾಡಿ ನಕಾಶೆ ತಯಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆಯರ್ ವರದಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ- 13 ಮತ್ತು 14 ರಂತೆ ನೀಡಿದ ಅರ್ಜಿಯ ಆಧಾರದಲ್ಲಿ ತಹಸಿಲ್ದಾರ್ ಮತ್ತು ಸರ್ವೆಯರ್ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಸದರಿ

ಅರ್ಜಿಗಳು ಇನ್ನೂ ಪೆಂಡಿಂಗ್ ಇರುತ್ತವೆ. ನಿಪಿ- 13 ಮತ್ತು 14 ರಂತೆ ನೀಡಿದ ಅರ್ಜಿಯ ಪ್ರಕಾರ ಆಸ್ತಿ ಸರ್ವೆ ಮಾಡಿಸಿರುವುದಿಲ್ಲ ಎಂದು ನನ್ನ ತಂದೆಯವರು ನೋಟಿಸ್ ಕೊಟ್ಟಿರುತ್ತಾರೆ ನಾನು ಕೊಟ್ಟಿರುವುದಿಲ್ಲ. ತಹಸೀಲ್ದಾರ್ ಮತ್ತು ಸರ್ವೆಯರ್ ರವರು ನನ್ನ ತಂದೆ ಸಲ್ಲಿಸಿದ ಅರ್ಜಿಗೆ ಸರಿಯಾಗಿ ಪ್ರತಿಕ್ರಿಯಿಸಿರುವುದಿಲ್ಲ ಎಂದು ನಾನು ಮೇಲಾಧಿಕಾರಿಗಳಿಗೆ ದೂರು ನೀಡಿರುತ್ತೇನೆ. ಸದರಿ ದೂರಿನ ನಕಲನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಿಪಿ 13 ಮತ್ತು 14 ರ ಪ್ರಕಾರ ತಲೂಕು ಸರ್ವೆಯರ್ ಸ್ಥಳಕ್ಕೆ ಭೇಟಿ ನೀಡಿ ಅಳತೆ ಕೆಲಸ ಪೂರೈಸಿ ನಕಾಶೆ ತಯಾರು ಮಾಡಿ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ತಾಲೂಕು ಸರ್ವೆಯರ್ ರವರು ಮಾಡಿದ ಸರ್ವೆ ಮತ್ತು ನ ಕಾಶೆಯ ಬಗ್ಗೆ ನನ್ನ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಕಾಶೆಯಲ್ಲಿ ಸರ್ವೆ ನಂ.1121.ಎ. ನೇದರ ಪಶ್ಚಿಮ ದಿಕ್ಕಿಗೆ ಇರು ವ 90 ಸೆಂಟ್ಸ್ ಆಸ್ತಿಯೂ 1 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದು ನಕಾಶೆಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾಖಲೆಗಳನ್ನು ನೋಡಲು ಕಣ್ಣು ಕಾಣುವುದಿಲ್ಲ. 1 ನೇ ಪ್ರತಿವಾದಿಯೂ ಸರ್ವೆನಂ. 715 ರಲ್ಲಿ 90 ಸೆಂಟ್ಸ್ ಆಸ್ತಿಯಾ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸತ್ಯಾಂಶ ಬಯಲಾಗುತ್ತದೆ ಎನ್ನುವ ಉದ್ದೇಶದಿಂದ ಅದನ್ನು ಮುಚ್ಚಿಡಲು ಸರ್ವೆ ನಕಾಶೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿದ್ದು ಪಡಿ ಮಾಡಿದ ನಮೂನೆ-10 ರ ಪ್ರಕಾರ ಕೇವಲ 1 ಎಕರೆ 78 ಸೆಂಟ್ಸ್ ಮಾತ್ರ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವೆಯಲ್ಲಿ ತೋರಿಸಿದ ಚೆಕ್ಕುಬಂದಿಯುಳ್ಳ 2 ಎಕರೆ 20 ಸೆಂಟ್ಸ್ ಆಸ್ತಿಯೂ ಅಸ್ತಿತ್ವದಲ್ಲೆ ಇಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ತೋರಿಸಿದ ಚೆಕ್ಕು ಬಂದಿಯೂ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೂ ನನಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 90 ಸೆಂಟ್ಸ್ ಆಸ್ತಿಯ ಸ್ವಾಧಿನದಲ್ಲಿದ್ದು, 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ನಾನೇ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೂ ಮೂಲತಃ ವ್ಯವಸಾಯ ಮಾಡುತ್ತಿದ್ದು ಅವರಿಗೆ ಸದರಿ ಆಸ್ತಿಯನ್ನು ಹೊರತು ಪಡಿಸಿ ಅವರಿಗೆ ಬೇರೆ ಆಸ್ತಿ ಇಲ್ಲದೆ ಇರುವುದರಿಂದ ಅವರಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾರುಕಟ್ಟೆಯ ಬೆಲೆ ಹೆಚ್ಚಾಗಿರುವುದರಿಂದ ದುರಾಶೆಯಿಂದ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2 ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ**